# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು– 560113

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021–22 ದಿನಾಂಕ: 10.11.2021

## ದಿನಾಂಕ–10.11.2021 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ–51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು

| | ಸದಸ್ಯರ ಹೆಸರು ಮತ್ತು ಪದನಾಮ | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀಮತಿ.ತ್ರಿವೇಣಿ (ಅಧ್ಯಕ್ಷರು) | ಹಾಜರು |
| 2 | ಶ್ರೀ.ಪಾರ್ಥಸಾರಥಿ (ಸದಸ್ಯರು) | ಹಾಜರು |
| 3 | ಶ್ರೀ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 4 | ಶ್ರೀ.ರಾಜು(ಸದಸ್ಯರು) | ಹಾಜರು |
| 5 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 6 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 7 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 8 | ಶ್ರೀ.ಮಹೇಂದ್ರ ಕುಮಾರ್ (ಸಲಹೆಗಾರರು, ಕಂದಾಯ ಇಲಾಖೆ ) | ಹಾಜರು |
| 9 | ಶ್ರೀ.ಮರಿಯಾ ದಾಸ್ (ಮಾರ್ಷಲ್) | ಹಾಜರು |
| 10 | ಶ್ರೀ.ರಾಮಚಂದ್ರ (ಅಂಬೇಡ್ಕರ್ ನಗರ) | ಹಾಜರು |
| 11 | ಶ್ರೀ.ಶಿವರಾಮ್ (ಈಸ್ಟ್ ಆಫ್ ಎನ್.ಜಿ.ಇ.ಎಫ್ ಕ್ಷೇಮಾಭಿವೃದ್ಧಿ ಸಂಘ) | ಹಾಜರು |
| 12 | ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) | ಹಾಜರು |
| 13 | ಶ್ರೀ.ಅಭಿಲಾಷ್ (ರಾಮಮೂರ್ತಿ ನಗರ) | ಹಾಜರು |

ದಿನಾಂಕ–10.11.2021 ರಂದು ಪೂರ್ವಾಹ್ನ 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಶ್ರೀಮತಿ.ತ್ರಿವೇಣಿ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ.ಶಿವರಾಮ್ (ಈಸ್ಟ್ ಆಫ್ ಎನ್.ಜಿ.ಇ.ಎಫ್ ಕ್ಷೇಮಾಭಿವೃದ್ಧಿ ಸಂಘ) ರವರು ಮಾತನಾಡಿ ವಿಜಿನಾಪುರ ವ್ಯಾಪ್ತಿಯಲ್ಲಿ ಈಸ್ಟ್ ಆಫ್ ಎನ್.ಜಿ.ಎಫ್ ಬಡಾವಣೆಯಲ್ಲಿ ಬೀದಿ ದೀಪಗಳ ಸಮಸ್ಯೆ ಇದ್ದು, ಹಾಗೂ ಈ ಬಡಾವಣೆಯಲ್ಲಿ ಕಳ್ಳತನಗಳು ಆಗುತ್ತಿರುವುದರಿಂದ ಸಿ.ಸಿ.ಟಿ.ವಿ ಅಳವಡಿಸಿಕೊಡಲು ಕೋರಿರುತ್ತಾರೆ.

<u>ಕ್ರಮ:-</u> ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಹಾಗೂ ಸಹಾಯಕ ಅಭಿಯಂತರರು ವಿಜಿನಾಪುರ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

Scanned with CamScanner

2. ಶ್ರೀ. ರಾಜು ರವರು ಮಾತನಾಡುತ್ತಾ, ವಿಜಿನಾಪುರ ವ್ಯಾಪ್ತಿಯ ಮುರಗನ್ ದೇವಸ್ಥಾನದ ರಸ್ತೆಯಲ್ಲಿ ಕಲ್ವರ್ಟ್ ನಿರ್ಮಾಣ ಮಾಡಿದ್ದು, ನಿರ್ಮಾಣ ಮಾಡಿರುವ ಕಲ್ವರ್ಟ್‌ಗೆ ರ್ಯಾಂಪ್ ಹಾಕಿರುವುದಿಲ್ಲ, ರ್ಯಾಂಪ್ ಹಾಕಿಕೊಡಲು ಸಭೆಯಲ್ಲಿ ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಕೆ.ಆರ್.ಪುರ ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

3. ಶ್ರೀ. ಶ್ರೀ.ಪಾರ್ಥಸಾರಥಿ ರವರು ಮಾತನಾಡಿ ಆರ್.ಆರ್.ಬಡಾವಣೆ 2ನೇ ಅಡ್ಡರಸ್ತೆಯಲ್ಲಿ ಮಳೆ ಬಂದಾಗ ರಸ್ತೆಯಲ್ಲಿ ನೀರು ಹೆಚ್ಚಾಗಿ ನಿಲ್ಲುತ್ತದೆ. ಎಂದು ತಿಳಿಸಿದರು ಹಾಗೂ ರಾಜಕಾಲುವೆಯಲ್ಲಿ ಹೂಳನ್ನು ತೆಗೆಯಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು ವಿಜಿನಾಪುರ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

4. ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) ರವರು ಮಾತನಾಡಿ ಎನ್.ಆರ್ ಬಡಾವಣೆಯ ರಸ್ತೆಗಳಲ್ಲಿ ಅಲ್ಲಲ್ಲಿ ಡೆಬ್ರಿಸ್ ಮತ್ತು ಕಸ ಇರುತ್ತದೆ. ಅದನ್ನು ತೆರವುಗೊಳಿಸಲು ಸಭೆಯಲ್ಲಿ ಕೋರಿದರು.

ಕ್ರಮ:- ಆರೋಗ್ಯ ನಿರೀಕ್ಷಕರು ವಿಜಿನಾಪುರ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

5. ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಅಧ್ಯಕ್ಷರು ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kragall Nag

ವಾರ್ಡ್ ಸಮಿತಿ ಕಾರ್ಯದರ್ಶಿಗಳು,
ವಾರ್ಡ್ ನಂ.51, ವಿಜಿನಾಪುರ

ಅಧ್ಯಕ್ಷರು, ವಾರ್ಡ್ ಕಮಿಟಿ 10.11.2021.
ವಾರ್ಡ್ ನಂ.51, ವಿಜಿನಾಪುರ

Scanned with CamScanner